## ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ

**ಸಿ.ಸಿ. 5791/2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 2**

**ದಿನಾಂಕಃ** 01.07.2026 **ಸಿಡಬ್ಲ್ಯೂ 3**

| | |
|---|---|
| ಹೆಸರು | ಅರುಣ್ ಕುಮಾರ್ ಕೆ.ಎಂ. |
| ತಂದೆಯ ಹೆಸರು | ಮಹೇಶ್ವಪ್ಪ |
| ವಯಸ್ಸು | 39 ವರ್ಷ |
| ಉದ್ಯೋಗ | ಅಬಕಾರಿ ಉಪ ನಿರೀಕ್ಷಕರು, ಅಬಕಾರಿ ಆಯುಕ್ತರ ಕಚೇರಿ, ದಾವಣಗೆರೆ |
| ವಾಸ ಸ್ಥಳ | ದಾವಣಗೆರೆ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ದಿಃ06.02.2024 ರಿಂದ ದಿಃ24.11.2025 ರವರೆಗೆ ನಾನು ಅಬಕಾರಿ ನಿರೀಕ್ಷಕರ ಕಚೇರಿಯಲ್ಲಿ ಹರಿಹರ ವಲಯದಲ್ಲಿ ಅಬಕಾರಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ31.05.2025 ರಂದು ನಮ್ಮ ಮೇಲಾಧಿಕಾರಿಗಳ ನಿರ್ದೇಶನದ ಮೇರೆಗೆ ಅಬಕಾರಿ ಅಕ್ರಮಗಳನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ಹರಿಹರ ನಗರದ ಜೈಭೀಮ್ ನಗರದಲ್ಲಿ ಗಸ್ತು ಕಾರ್ಯ ಮಾಡುತ್ತಿರುವಾಗ ಅಬಕಾರಿ ಉಪ ನಿರೀಕ್ಷಕರು ಚಾಸಾ.1 ರವರಿಗೆ ಬಂದ ಮಾಹಿತಿ ಮೇರೆಗೆ ಜೈಭೀಮ್ ನಗರದ ನೀಲಪ್ಪ ಹರಳಿಕಟ್ಟೆ ಎಂಬುವರಿಗೆ ಸೇರಿದ ಮನೆಗೆ ಹೊಂದಿಕೊಂಡು ಕಿರಾಣಿ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ಅಲ್ಲಿಗೆ ಹೋಗಬೇಕಾಗಿ ಅಧಿಕಾರಿಗಳು ತಿಳಿಸಿರುತ್ತಾರೆ. ನಂತರ ನೀಲಪ್ಪ ಹರಳಿಕಟ್ಟೆ ರವರ ಕಿರಾಣಿ ಅಂಗಡಿಗೆ ಹೋಗಿ ಅಲ್ಲಿದ್ದ ಸ್ಥಳೀಯರನ್ನು ಪಂಚರಾಗಿ ಕೋರಲಾಗಿ ಅವರು ಒಪ್ಪದೇ ಇರುವ ಕಾರಣ ಅಧಿಕಾರಿಗಳು ಇಲಾಖಾ ಸಿಬ್ಬಂದಿಗಳಾದ ನಾನು, ಮತ್ತು ಚಾಸಾ.2 ರವರನ್ನು ಸ್ಥಳದಲ್ಲಿಯೇ ಶೋಧನಾ ವಾರಂಟ್ ತಯಾರಿಸಿ ನಮ್ಮ ಸಹಿ ಪಡೆದಿರುತ್ತಾರೆ. ನಂತರ ಮನೆಯನ್ನು ಪ್ರವೇಶಿಸಿದಾಗ ಅಂಗಡಿ ದಕ್ಷಿಣಾಭಿಮುಖವಾಗಿದ್ದು, ಬಲಗಡೆಯ ಗಲ್ಲಾಪೆಟ್ಟಿಗೆ ಕೆಳಗೆ ಸ್ಟಾರ್ ಪಾನ್ ಮಸಾಲಾ ಚೀಲ ಇರುವುದು ಕಂಡು ಬಂದಿತ್ತು. ನಂತರ ಅದನ್ನು ಶೋಧನೆ ಮಾಡಲಾಗಿ ಅದರಲ್ಲಿ ಮದ್ಯದ ಹೈ ವಾಟ್ಸ ಚಿಯರ್ಸ ವಿಸ್ಕಿಯ 25 ಟೆಟ್ರಾ ಪ್ಯಾಕೆಟಗಳು, ಒಸಿ ವಿಸ್ಕಿಯ 25 ಟೆಟ್ರಾ ಪ್ಯಾಕೆಟ್ ಗಳು, ಒಟ್ಟು 50 ಟೆಟ್ರಾ ಪ್ಯಾಕೆಟ್‌ಗಳು ಇದ್ದವು. ಅವುಗಳ ಮೇಲಿರುವ ಭದ್ರತಾ ಸಂಖ್ಯೆಗಳನ್ನು ಕಿತ್ತು ಹಾಕಲಾಗಿತ್ತು. ನಂತರ ಆ ವ್ಯಕ್ತಿಯನ್ನು ಕರೆದ ಹೆಸರು ಕೇಳಲಾಗಿ ನೀಲಪ್ಪ ಹರಳಿಕಟ್ಟೆ ಎಂದು ಉತ್ತರಿಸಿದ್ದು, ದೊರೆತ ಮು.ಮಾ.ಗಳಿಂದ ಹೈ ವಾಟ್ಸ ಚಿಯರ್ಸ ವಿಸ್ಕಿಯಿಂದ 17 ಟೆಟ್ರಾ ಪ್ಯಾಕೆಟ್, ಒಸಿ ವಿಸ್ಕಿಯಿಂದ 9 ಟೆಟ್ರಾ ಪ್ಯಾಕೆಟಗಳನ್ನು ಒಟ್ಟು 26 ಟೆಟ್ರಾ ಪ್ಯಾಕೆಟಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಸೀಲ್ ಮಾಡಿ ಪಂಚನಾಮೆಯನ್ನು 6.15 ರಿಂದ 6.45 ರವರೆಗೆ ಜರುಗಿಸಿ ಚಾಸಾ.1 ರವರು ಚಾಸಾ.1 ರವರು ಮು.ಮಾ. ಹಾಗೂ ಆರೋಪಿತರೊಂದಿಗೆ ಕಚೇರಿಗೆ ಬಂದು ದೂರನ್ನು ಕೊಟ್ಟಿರುತ್ತಾರೆ. ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಯು ನಿಪಿ.1 ರಿಂದ 4 ರಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.1 ಬಿ ರಿಂದ 4 ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.5 ಪೋಟೋವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತನನ್ನು ಹಾಗೂ ಮು.ಮಾ.ಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿತರ ಶ್ರೀ ಪಿ ಎಸ್ ಜೆ ವಕೀಲರಿಂದಃ

ಚಾಸಾ.1 ರವರಿಗೆ ಸದರಿ ದಿನ ಯಾವ ರೀತಿ ಮಾಹಿತಿ ಬಂದಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಜೈ ಭೀಮ್ ನಗರ ಹರಿಹರ ನಗರಕ್ಕೆ ಹೊಂದಿಕೊಂಡ ನಗರ ಎಂದರೆ ಸರಿ. ಹರಿಹರ ನಗರದಲ್ಲಿ ಒಟ್ಟು 28 ಬಾರ್ ಅಂಗಡಿಗಳಿರುತ್ತವೆ. ನಾವು ಪಂಚರನ್ನು ಕರೆದಿದ್ದು ಅವರು ನಿರಾಕರಿಸಿರುತ್ತಾರೆ ಅವರ ಹೆಸರುಗಳನ್ನು ಹೇಳಲು ಬರುವುದಿಲ್ಲ. ಅವರ ಹೆಸರು ಮತ್ತು ವಿಳಾಸವನ್ನು ಹುಡುಕಲು ನಾವು ಪ್ರಯತ್ನ ಪಟ್ಟಿರುವುದಿಲ್ಲ. 50 ಮು.ಮಾ.ಗಳು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನಮ್ಮ ಸಿಬ್ಬಂದಿ ಚಾಸಾ.2 ರವರು ಬರೆದಿರುತ್ತಾರೆ. ಪೋಟೋವನ್ನು ಚಾಸಾ.2 ರವರು ತೆಗೆದಿರುತ್ತಾರೆ. ಪಂಚನಾಮೆಯನ್ನು ಬರೆಯುವ ಕಾಲಕ್ಕೆ ಕತ್ತಲು ಇತ್ತು ಎಂದರೆ ಸರಿ. ಕತ್ತಲು ಇರುವುದರಿಂದ ಪೋಟೋ ತೆಗೆಯಲು ಮತ್ತು ಪಂಚನಾಮೆಯನ್ನು ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿಯು ಮನೆಯ ಮುಂದೆ ದೀಪದ ಕಂಬ ಇತ್ತು ಎಂದು ಉತ್ತರಿಸುತ್ತಾರೆ. ಚೆಕ್ ಬಂದಿಯಲ್ಲಿ ದೀಪದ ಕಂಬದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ವಶಪಡಿಸಿಕೊಳ್ಳಲಾದ 50 ಟೆಟ್ರಾ ಪ್ಯಾಕೆಟಗಳು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ನಾವು ಎಲ್ಲಾ ಪೋಲೀಸ್ ಸಾಕ್ಷಿದಾರರು ಇದ್ದೇವೆ ಎಂದರೆ ಸರಿ. ನಾವು ಪಂಚನಾಮೆಯನ್ನು ಸ್ಥಳದಲ್ಲಿಯೇ ಮಾಡಿರುವುದಿಲ್ಲ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದೂರನ್ನು ಯಾರು ಕೊಟ್ಟಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಠಾಣೆಯ ಅಂಕೆ ಸಂಖ್ಯೆಗೋಸ್ಕರ ದೂರು , ಪಂಚನಾಮೆ ಹಾಗೂ ಮುದ್ದೆ ಮಾಲುಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ.